# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 840 |
| ಮಾನ್ಯ ಸದಸ್ಯರ ಹೆಸರು | ಶ್ರೀ ಟಿ.ಎ. ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 26-12-2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ತುಮಕೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಗರ್ಭಿಣಿ ಸ್ತ್ರೀಯನ್ನು ಹೆರಿಗೆ ಆಸ್ಪತ್ರೆಗೆ ಸೇರಿಸಲು ಅವಕಾಶ ಸಿಗದೆ ಮನೆಯಲ್ಲಿ ಹೆರಿಗೆಯಾದ ಅವಳಿ ಮಕ್ಕಳ ಸಹಿತ ತಾಯಿ ಮೃತಪಟ್ಟ ಧಾರುಣ ಸಾವಿನ ಘಟನೆಯ ಬಗ್ಗೆ ಸರ್ಕಾರ ತನಿಖೆ ನಡೆಸಿದೆಯೇ; ನಡೆಸಿದ್ದಲ್ಲಿ, ತನಿಖಾ ವರದಿಯನ್ನು ನೀಡುವುದು; | ಈ ಘಟನೆಯ ಸತ್ಯಾಸತ್ಯತೆಯನ್ನು ತಿಳಿಯಲು ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ ವರದಿ ಪಡೆಯಲು ಆದೇಶಿಸಲಾಗಿರುತ್ತದೆ. ಸದರಿ ಪ್ರಕರಣವು ವಿಚಾರಣೆ ಹಂತದಲ್ಲಿದ್ದು, ವಿಚಾರಣಾ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. |
| ಆ | ಈ ಘಟನೆಯಲ್ಲಿ ಒಂದು ಹೆಣ್ಣು ಮಗು ತಬ್ಬಲಿಯಾಗಿದ್ದು, ಆ ಮಗುವಿನ ಯೋಗಕ್ಷೇಮ ಮತ್ತು ಭವಿಷ್ಯದ ಉಸ್ತುವಾರಿಯನ್ನು ಸರ್ಕಾರ ನೋಡಿಕೊಳ್ಳಲಿದೆಯೇ, ಈಗ ಆ ಮಗು ಎಲ್ಲಿದೆ, ಯಾವ ಶಾಲೆಯಲ್ಲಿ ಓದುತ್ತಿದೆ, ಎಲ್ಲಿ ಆಶ್ರಯ ಪಡೆದಿದೆ; (ಮಾಹಿತಿ ನೀಡುವುದು). | ಈ ಘಟನೆಯಿಂದಾಗಿ ತಬ್ಬಲಿಯಾದ ಕು॥ ಶಂಕರಿ ಎಸ್., ಹೆಣ್ಣು ಮಗುವಿನ ಉಸ್ತುವಾರಿಯನ್ನು ಸರ್ಕಾರವು ನೋಡಿಕೊಳ್ಳುತ್ತಿದ್ದು, ಪರಿಹಾರವಾಗಿ ಮಗುವಿನ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಡಿ.ಸಿ.ಪಿ.ಒ) ಇವರ ಹೆಸರಿನಲ್ಲಿ ರೂ.10.00 ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಮಾಡಲಾಗಿರುತ್ತದೆ. |
| ಇ | ಸದರಿ ಮಗುವಿನ ಜವಾಬ್ದಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ?(ವಿವರ ನೀಡುವುದು). | ಪ್ರಸ್ತುತ ಮಗುವನ್ನು ತುಮಕೂರಿನ ಬಾಲಮಂದಿರದಲ್ಲಿರಿಸಿ ಪೋಷಣೆಗಾಗಿ ಒಪ್ಪಿಸಲಾಗಿದೆ ಹಾಗೂ ಎಲ್ಲಾ ವೈದ್ಯಕೀಯ ಸೌಲಭ್ಯಗಳನ್ನು ಮತ್ತು ಆರೋಗ್ಯ ತಪಾಸಣೆಗಳನ್ನು ಒದಗಿಸಲಾಗುತ್ತಿದೆ. |

ಕಡತ ಸಂಖ್ಯೆ: ಆಕುಕ 840 ಚುರಪ್ರ 2022

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು